ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ
ಕರ್ನಾಟಕ ಸರ್ಕಾರ
ಬಹುಮಹಡಿಗಳ ಕಟ್ಟಡ, ಗೇಟ್-4
ಪಿ.ಬಿ. ನಂ. 5257
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದೂರವಾಣಿ ಸಂ.: 080-22258388

ಕರ್ನಾಟಕ ಸರ್ಕಾರ
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

ಸಂಖ್ಯೆ:DTCP-3-BLR/CBR/LAY-2017-18. 31 AUG 2017

## ತಾಂತ್ರಿಕ ಅನುಮೋದನೆ

ವಿಷಯ:- ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾ||, ಗೂಳೂರು ಹೋ||, ನಲ್ಲಪರೆಡ್ಡಿಪಲ್ಲಿ ಗ್ರಾಮದ ಸ.ನಂ.81 ರಲ್ಲಿ 06ಎಕರೆ-20ಗುಂಟೆ ಪೈಕಿ 00ಎಕರೆ-19ಗುಂಟೆ 'ಬಿ' ಖರಾಬು ಹೊರತುಪಡಿಸಿ 06ಎಕರೆ-01ಗುಂಟೆ, ಸ.ನಂ.82/1 ರಲ್ಲಿ 00ಎಕರೆ-29ಗುಂಟೆ ಪೈಕಿ 00ಎಕರೆ-03ಗುಂಟೆ 'ಬಿ' ಖರಾಬು ಹೊರತುಪಡಿಸಿ 00ಎಕರೆ-26ಗುಂಟೆ, ಸ.ನಂ.82/2 ರಲ್ಲಿ 01ಎಕರೆ-0.5ಗುಂಟೆ ಪೈಕಿ 00ಎಕರೆ-8½ಗುಂಟೆ 'ಬಿ' ಖರಾಬು ಹೊರತುಪಡಿಸಿ 00ಎಕರೆ-32ಗುಂಟೆ, ಸ.ನಂ.82/3 ರಲ್ಲಿ 01ಎಕರೆ-39ಗುಂಟೆ ಪೈಕಿ 00ಎಕರೆ-04ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-35ಗುಂಟೆ, ಸ.ನಂ.82/4 ರಲ್ಲಿ 01ಎಕರೆ-33ಗುಂಟೆ ಪೈಕಿ 00ಎಕರೆ-01ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-32ಗುಂಟೆ, ಸ.ನಂ.82/5 ರಲ್ಲಿ 01ಎಕರೆ-24ಗುಂಟೆ ಪೈಕಿ 00ಎಕರೆ-09ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-15ಗುಂಟೆ, ಸ.ನಂ.209/1 ರಲ್ಲಿ 00ಎಕರೆ-06ಗುಂಟೆ, 209/2 ರಲ್ಲಿ 00ಎಕರೆ-33ಗುಂಟೆ, ಸ.ನಂ.209/3 ರಲ್ಲಿ 00ಎಕರೆ-27ಗುಂಟೆ, ಸ.ನಂ.209/4 ರಲ್ಲಿ 00ಎಕರೆ-30ಗುಂಟೆ, ಸ.ನಂ.209/5 ರಲ್ಲಿ 00ಎಕರೆ-33ಗುಂಟೆ, ಸ.ನಂ.209/6 ರಲ್ಲಿ 00ಎಕರೆ-27ಗುಂಟೆ ಪೈಕಿ 00ಎಕರೆ-01ಗುಂಟೆ 'ಅ' ಖರಾಬು ಹೊರತುಪಡಿಸಿ 00ಎಕರೆ-26ಗುಂಟೆ, ಸ.ನಂ.210/1 ರಲ್ಲಿ 03ಎಕರೆ-07ಗುಂಟೆ ಪೈಕಿ 00ಎಕರೆ-01ಗುಂಟೆ 'ಅ' ಖರಾಬು ಹೊರತುಪಡಿಸಿ 03ಎಕರೆ-06ಗುಂಟೆ, ಸ.ನಂ.210/3 ರಲ್ಲಿ 02ಎಕರೆ-20ಗುಂಟೆ, ಒಟ್ಟು 22ಎಕರೆ-02ಗುಂಟೆ ವಿಸ್ತೀರ್ಣದ ಜಮೀನಿನ "ವಸತಿ ವಿನ್ಯಾಸ ನಕ್ಷೆ" ಗೆ ತಾಂತ್ರಿಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-
1. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇವರ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಂ:ಎಎಲ್ಎನ್(ಬಾ-2)ಎಸ್ಆರ್.01&02/2016-17, ದಿ:20-01-2017 ಮತ್ತು 31-01-2017.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಲ್ಲಪ್ಪರೆಡ್ಡಿಪಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಬಾಗೇಪಲ್ಲಿ ತಾಲ್ಲೂಕು ಇವರ ಪತ್ರ ದಿ:20-02-2017.
3. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ರವರ ಪತ್ರ ಸಂ:ನಗ್ರಾಯೋಸನಿ/ಚಿಬ/ವಿನ್ಯಾಸ/84/2016-17/229, ದಿ:16-06-2017.
4. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕೈಪಿಡಿ ಸಂ:ಗ್ರಾಅಪ 86 ಗ್ರಾಪಂಅ 2014, ದಿ:11-11-2014.

******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾ||, ಗೂಳೂರು ಹೋ||, ನಲ್ಲಪರೆಡ್ಡಿಪಲ್ಲಿ ಗ್ರಾಮದ ಸ.ನಂ.81 ರಲ್ಲಿ 06ಎಕರೆ-20ಗುಂಟೆ ಪೈಕಿ 00ಎಕರೆ-19ಗುಂಟೆ 'ಬಿ' ಖರಾಬು ಹೊರತುಪಡಿಸಿ 06ಎಕರೆ-01ಗುಂಟೆ, ಸ.ನಂ.82/1 ರಲ್ಲಿ 00ಎಕರೆ-29ಗುಂಟೆ ಪೈಕಿ 00ಎಕರೆ-03ಗುಂಟೆ 'ಬಿ' ಖರಾಬು ಹೊರತುಪಡಿಸಿ 00ಎಕರೆ-26ಗುಂಟೆ, ಸ.ನಂ.82/2 ರಲ್ಲಿ 01ಎಕರೆ-0.5ಗುಂಟೆ ಪೈಕಿ 00ಎಕರೆ-8½ಗುಂಟೆ

'ಬಿ' ಖರಾಬು ಹೊರತುಪಡಿಸಿ 00ಎಕರೆ-32ಗುಂಟೆ, ಸ.ನಂ.82/3 ರಲ್ಲಿ 01ಎಕರೆ-39ಗುಂಟೆ ಪೈಕಿ 00ಎಕರೆ-04ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-35ಗುಂಟೆ, ಸ.ನಂ.82/4 ರಲ್ಲಿ 01ಎಕರೆ-33ಗುಂಟೆ ಪೈಕಿ 00ಎಕರೆ-01ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-32ಗುಂಟೆ, ಸ.ನಂ.82/5 ರಲ್ಲಿ 01ಎಕರೆ-24ಗುಂಟೆ ಪೈಕಿ 00ಎಕರೆ-09ಗುಂಟೆ 'ಬಿ' ಖರಾಬು ಹೊರತುಪಡಿಸಿ 01ಎಕರೆ-15ಗುಂಟೆ, ಸ.ನಂ.209/1 ರಲ್ಲಿ 00ಎಕರೆ-06ಗುಂಟೆ, 209/2 ರಲ್ಲಿ 00ಎಕರೆ-33ಗುಂಟೆ, ಸ.ನಂ.209/3 ರಲ್ಲಿ 00ಎಕರೆ-27ಗುಂಟೆ, ಸ.ನಂ.209/4 ರಲ್ಲಿ 00ಎಕರೆ-30ಗುಂಟೆ, ಸ.ನಂ.209/5 ರಲ್ಲಿ 00ಎಕರೆ-33ಗುಂಟೆ, ಸ.ನಂ.209/6 ರಲ್ಲಿ 00ಎಕರೆ-27ಗುಂಟೆ ಪೈಕಿ 00ಎಕರೆ-01ಗುಂಟೆ 'ಅ' ಖರಾಬು ಹೊರತುಪಡಿಸಿ 00ಎಕರೆ-26ಗುಂಟೆ, ಸ.ನಂ.210/1 ರಲ್ಲಿ 03ಎಕರೆ-07ಗುಂಟೆ ಪೈಕಿ 00ಎಕರೆ-01ಗುಂಟೆ 'ಅ' ಖರಾಬು ಹೊರತುಪಡಿಸಿ 03ಎಕರೆ-06ಗುಂಟೆ, ಸ.ನಂ.210/3 ರಲ್ಲಿ 02ಎಕರೆ-20ಗುಂಟೆ, ಒಟ್ಟು 22ಎಕರೆ-02ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತಿಸಿ ಕಂದಾಯ ಇಲಾಖೆಯಿಂದ ಅಧಿಕೃತ ಜ್ಞಾಪನಾ ಪತ್ರವನ್ನು ಹೊರಡಿಸಲಾಗಿದ್ದು, ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಲ್ಲಪ್ಪರೆಡ್ಡಿಪಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಬಾಗೇಪಲ್ಲಿ ತಾಲ್ಲೂಕು ಇವರು ಉಲ್ಲೇಖ(2)ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಉಲ್ಲೇಖ(3) ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರು ಸ್ಥಳ ಪರಿಶೀಲಿಸಿ ಕರಡು ವಸತಿ ವಿನ್ಯಾಸದೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರ ಸಂ:ಎ.ಎಲ್.ಎನ್(ಬಾ-2) ಎಸ್.ಆರ್.01/2016-17, ದಿನಾಂಕ:31-01-2017 ರಂದು ರಿ.ಸ.ನಂ.209/1 ರಲ್ಲಿ 00ಎ-06ಗುಂ, 209/2 ರಲ್ಲಿ 00ಎ-33ಗುಂ, 209/3 ರಲ್ಲಿ 00ಎ-27ಗುಂ, 209/4 ರಲ್ಲಿ 00ಎ-30ಗುಂ, 209/5 ರಲ್ಲಿ 00ಎ-33ಗುಂ, 209/6 00ಎ-26ಗುಂ, 210/1 ರಲ್ಲಿ 03ಎ-06ಗುಂ ಮತ್ತು 210/3 ರಲ್ಲಿ 02ಎ-20ಗುಂ ಒಟ್ಟು 09ಎ-21ಗುಂ ಜಮೀನು ಶ್ರೀ ನೌಷಾದ್ ಬಿನ್ ಖಾದರ್ ಸಾಬ್ ಇವರ ಹೆಸರಿನಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ನಂತರ ಪೂರ್ಣ ಜಮೀನು ದಿನಾಂಕ:01-02-2017 ರಂದು ಕೌಸ್ತುಭ ಡೆವಲಪರ್ಸ್ ಮ್ಯಾನೆಜಿಂಗ್ ಪಾರ್ಟ್ನರ್ ಶ್ರೀ ಜಿ. ವಿ ರವಿಚಂದ್ರ ಬಿನ್ ರಾಜು ಇವರ ಹೆಸರಿಗೆ ಕ್ರಯವಾಗಿರುತ್ತದೆ. ಹಾಗೂ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರ ಸಂ:ಎ.ಎಲ್.ಎನ್(ಬಾ-2) ಎಸ್.ಆರ್.02/2016-17, ದಿನಾಂಕ:20-01-2017 ರಿ.ಸ.ನಂ.81 ರಲ್ಲಿ 06ಎ-01ಗುಂ, 82/1 ರಲ್ಲಿ 00ಎ-26ಗುಂ, 82/2 ರಲ್ಲಿ 00ಎ-32ಗುಂ, 82/3 ರಲ್ಲಿ 01ಎ-35ಗುಂ, 82/4 ರಲ್ಲಿ 01ಎ-32ಗುಂ ಮತ್ತು 82/5 ರಲ್ಲಿ 01ಎ-15ಗುಂ ಒಟ್ಟು 12ಎ-21ಗುಂ ಜಮೀನು ಶ್ರೀ ಸಿ. ಜಯಸಿಂಹರೆಡ್ಡಿ ಬಿನ್ ಲೇಟ್ ಚಿನ್ನಪ್ಪರೆಡ್ಡಿ ಇವರ ಹೆಸರಿನಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ನಂತರ ದಿನಾಂಕ:01-02-2017 ರಂದು ಕೌಸ್ತುಭ ಡೆವಲಪರ್ಸ್ ಮ್ಯಾನೆಜಿಂಗ್ ಪಾರ್ಟ್ನರ್ ಶ್ರೀ ಜಿ. ವಿ ರವಿಚಂದ್ರ ಬಿನ್ ರಾಜು ಇವರ ಹೆಸರಿಗೆ ಕ್ರಯವಾಗಿರುತ್ತದೆ.

ಕಂದಾಯ ಇಲಾಖೆಯ ಸರ್ವೆಸ್ಕೆಚ್‌ನ್ನು ಪರಿಗಣನೆಗೆ ತೆಗೆದುಕೊಂಡು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರು ಸಲ್ಲಿಸಿರುವ ಕರಡು ವಸತಿ ವಿನ್ಯಾಸ ನಕ್ಷೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಲಾಗಿದ್ದು, ಸದರಿ ವಿನ್ಯಾಸದಲ್ಲಿ ವಸತಿ ಉಪಯೋಗಕ್ಕಾಗಿ 49038.00ಚ.ಮೀ

(ಶೇ.54.96), ಸಾರ್ವಜನಿಕ ಸೌಲಭ್ಯಕ್ಕಾಗಿ 5035.49 ಚ.ಮೀ (ಶೇ.5.64), ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 7387.00 ಚ.ಮೀ (ಶೇ.8.28), ಹಾಗೂ ರಸ್ತೆಗಾಗಿ 27771.45 ಚ.ಮೀ (ಶೇ.31.12) ರಷ್ಟು ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಲಾಗಿದೆ.

ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲಾದ ಪ್ರದೇಶದಲ್ಲಿ 9.14ಮೀ.X15.24ಮೀ. ಅಳತೆಯ 86 ನಿವೇಶನಗಳು, 9.14ಮೀX12.19ಮೀ ಅಳತೆಯ 175 ನಿವೇಶನಗಳು ಹಾಗೂ 124 ಅನಿಯತ ನಿವೇಶನಗಳು ಸೇರಿದಂತೆ ಒಟ್ಟು 385 ನಿವೇಶನಗಳನ್ನು ಅಳವಡಿಸಲಾಗಿದೆ. ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ, ಗ್ರಾಮ ಪಂಚಾಯಿತಿಯು ವಿನ್ಯಾಸ ಅನುಮೋದನೆ ಆದೇಶ ಹೊರಡಿಸಬೇಕಾಗಿದ್ದು, ಉಲ್ಲೇಖ (4)ರ ಕೈಪಿಡಿಯಲ್ಲಿನ ಮಾರ್ಗಸೂಚನೆಗಳನ್ನು ಹಾಗೂ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗಳಿಗೊಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

1) **ವಿನ್ಯಾಸವು ಅನುಮೋದನೆ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ನವೀಕರಿಸಿಕೊಳ್ಳತಕ್ಕದ್ದು. (ಉಲ್ಲೇಖ(4)ರ ಕೈಪಿಡಿಯ ಮಾರ್ಗಸೂಚಿಯನ್ವಯ)**
2) ಅಭಿವೃದ್ಧಿ ಶುಲ್ಕವನ್ನು ಅಂದಾಜು ಪಟ್ಟಿಯಂತೆ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು.
3) ಅನುಮೋದಿತ ವಿನ್ಯಾಸದಲ್ಲಿರುವಂತೆಯೇ ನಿವೇಶನಗಳು, ರಸ್ತೆಗಳು ಉದ್ಯಾನವನ/ಬಯಲುಜಾಗ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ (Civic Amenities) ಕಾಯ್ದಿರಿಸಿರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು.
4) ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ **ಪೂರ್ವಾನುಮತಿಯಿಲ್ಲದೆ** ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
5) ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಹಾಗೂ ಉದ್ಯಾನವನದಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
6) ಅನುಮೋದಿತ ವಸತಿ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನ/ಬಯಲುಜಾಗ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ (Civic Amenities) ಕಾಯ್ದಿರಿಸಿರುವ ಪ್ರದೇಶಗಳನ್ನು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯು/ ಗ್ರಾಮ ಪಂಚಾಯಿತಿಯು, ಅರ್ಜಿದಾರರಿಗೆ / ಅಭಿವೃದ್ಧಿದಾರರಿಗೆ **ಯಾವುದೇ ಪರಿಹಾರವನ್ನು ನೀಡದೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪಡೆಯತಕ್ಕದ್ದು.**
7) ವಿನ್ಯಾಸವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರವೇ ಗ್ರಾಮಪಂಚಾಯ್ತಿಯಿಂದ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡತಕ್ಕದ್ದು.
8) ಅನುಮೋದಿತ ವಿನ್ಯಾಸದ ಸೂಕ್ತ ಸ್ಥಳಗಳಲ್ಲಿ ನೀರು ಇಂಗುಗುಳಿ (Water Recharge) ಮತ್ತು ಮಳೆ ನೀರು ಸಂಗ್ರಹಣೆ (Rain water harvesting pits) ಗಳನ್ನು ಗುರ್ತಿಸಿ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

9) ಸ್ಥಳೀಯ ಸಂಸ್ಥೆಯು ವಿನ್ಯಾಸ ಅಂಗೀಕಾರ ನೀಡುವ ಪೂರ್ವದಲ್ಲಿ ಇತರೆ ಯಾವುದೇ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕಾಗಿದ್ದಲ್ಲಿ ಅರ್ಜಿದಾರರಿಂದ ಅಂತಹ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

10) ಅನುಮೋದಿತ ಬಡಾವಣೆಯಲ್ಲಿ **ಕೊಳವೆ ಬಾವಿಯನ್ನು ಕೊರೆಯುವಾಗ** ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಹಾಗೂ ತೆರೆದ ಕೊಳವೆ ಬಾವಿಗಳ ಬಗ್ಗೆ ಭೂ ಮಾಲೀಕರುಗಳು ಮತ್ತು ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:31-12-2012 ಮತ್ತು ದಿನಾಂಕ:06-08-2014 ರಂದು ಸರ್ಕಾರವು ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮವಹಿಸತಕ್ಕದ್ದು.

11) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನೀಡಿರುವ CFE ಪತ್ರ ಸಂಖ್ಯೆ: ಪಿಸಿಬಿ/584/ಸಿಎನ್‌ಪಿ/16/OB-214, ದಿನಾಂಕ:06-06-2017 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಅರ್ಜಿದಾರರು ತಪ್ಪದೇ ಪಾಲಿಸತಕ್ಕದ್ದು.

12) ಸದರಿ ಬಡಾವಣೆಯಲ್ಲಿ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟನ್ನು ಅಳವಡಿಸಿ **"ಗೇಟೆಡ್ ಕಮ್ಯುನಿಟಿ"** ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಹಾಗೂ ಸದರಿ ಬಡಾವಣೆಯಲ್ಲಿನ ರಸ್ತೆ/ ಉದ್ಯಾನವನ / ಬಯಲುಜಾಗೆ/ ಸಾರ್ವಜನಿಕ ಉದ್ದೇಶದ (Civic Amenities) ಜಾಗೆಗಳು ಸಾರ್ವಜನಿಕ ಸ್ವತ್ತಾಗಿರುತ್ತದೆ. ಆದ್ದರಿಂದ, ಸಾರ್ವಜನಿಕ ಸ್ವತ್ತುಗಳನ್ನು ಮುಕ್ತವಾಗಿಡತಕ್ಕದ್ದು.

13) ವಿನ್ಯಾಸದ ತಾಂತ್ರಿಕ ಅನುಮೋದನೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಯು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಈ ಅಂಗೀಕಾರ ತಾನಾಗಿ ರದ್ದುಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯು ವಿನ್ಯಾಸ ಅನುಮೋದಿಸಿದಲ್ಲಿ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

14) ಈ ವಿನ್ಯಾಸಕ್ಕೆ ತಾಂತ್ರಿಕ ಅನುಮೋದನೆ ನೀಡಲು ಕಂದಾಯ ಇಲಾಖೆಯ ಭೂ ಪರಿವರ್ತನೆ ಆದೇಶಗಳು/ ಅಟ್ಲಾಸ್ ಪ್ರತಿ ಆಧರಿಸಿ ಕ್ರಮವಹಿಸಿರುವುದರಿಂದ ಸದರಿ ದಾಖಲಾತಿಗಳ ಮೂಲ ಪರಿಶೀಲನೆಯು ಕಂದಾಯ ಇಲಾಖೆಗೆ ಒಳಪಡುವುದರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

ಸಹಿ/-

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

**ಪ್ರತಿಯನ್ನು:**

1. ಅನುಮೋದಿತ ವಿನ್ಯಾಸದ 3 ಪ್ರತಿಗಳೊಂದಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಲ್ಲಪ್ಪರೆಡ್ಡಿಪಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಬಾಗೇಪಲ್ಲಿ ತಾಲ್ಲೂಕು, ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. ಹಾಗೂ ವಿನ್ಯಾಸಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ **ಅನುಮೋದಿಸಿದ ನಂತರ ಒಂದು ಪ್ರತಿಯನ್ನು (ಆದೇಶದೊಂದಿಗೆ) ಸಂಬಂಧಿಸಿದ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗೆ ಕಳುಹಿಸುವಂತೆ ಕೋರಿದೆ.**
2. ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗೀಯ ಕಛೇರಿ, ಬೆಂಗಳೂರು ಇವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

3. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ಇವರಿಗೆ ನಕ್ಷೆಯ ಪ್ರತಿಯೊಂದಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಅರ್ಜಿದಾರರಾದ ಶ್ರೀ ಜಿ. ವಿ ರವಿಚಂದ್ರ ಬಿನ್ ರಾಜು, ಮ್ಯಾನೆಂಜಿಗ್ ಪಾರ್ಟನರ್, ಮೆ॥ ಕೌಸ್ತುಬ್ ಡೆವಲಪರ್ಸ್, ಕೆ.ವಿ.ಎನ್ ಕಾಂಪ್ಲೆಕ್ಸ್, 1ನೇ ಪ್ಲೋರ್, ಎನ್.ಆರ್.ಐ ಲೇಔಟ್, ಡಬಲ್ ರಸ್ತೆ, ರಾಮೂರ್ತಿನಗರ, ಬೆಂಗಳೂರು–16 ಇವರಿಗೆ ಪತ್ರದ ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ.
5. ರೇಖಾ ವಿಭಾಗ.
6. ಕಛೇರಿ ಪ್ರತಿ.

3/8

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು